**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**
**<u>ಪ್ರಕರಣ ಸಂಖ್ಯೆಃ ಎಸ್.ಸಿ 26/2020</u>**

ದಿನಾಂಕಃ 06.09.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 1 (ಚಾ.ಸಾ.1 )

| | | |
|---|---|---|
| ಹೆಸರು | ಃ | ಸಿಮ್ರಾನ್ |
| ತಂದೆಯ ಹೆಸರು | ಃ | ಸೈಯದ್ ಸಾದಿಕ್ |
| ವಯಸ್ಸು | ಃ | 20 ವರ್ಷ |
| ಉದ್ಯೋಗ | ಃ | ವೆಲ್ಡಿಂಗ್ ಕೆಲಸ |
| ವಾಸ ಸ್ಥಳ | ಃ | ಚನ್ನಪಟ್ಟಣ |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಆರೋಪಿ ಸೈಯದ್ ಜಬೀರ್ ಹಾಗು ಚಾಸಾ.2 ಗೊತ್ತು. ನನಗೆ ಸಾಕ್ಷಿ ಸುಹೇಲಾ ಖಾನ್ ಹಾಗು ಮುಷಾ ಫಿರ್ ಗೊತ್ತು.

2. ತಾಃ 21.01.2020 ರಂದು ರಾತ್ರಿ 11 ಗಂಟೆ ಸಮಯದಲ್ಲಿ ನಾನು, ಫರಾದ್ ಹಾಗು ಸುಹೇಲಾ ಖಾನ್ ಡಿಯೋ ದ್ವಿಚಕ್ರ ವಾಹನದಲ್ಲಿ ರಾಮನಗರದಿಂದ ಚನ್ನಪಟ್ಟಣಕ್ಕೆ ಹೋಗುತ್ತಿದ್ದೆವು. ಸದರಿ ವಾಹನವನ್ನು ಸುಹೇಲಾ ಚಲಾಯಿಸುತ್ತಿದ್ದನು. ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ಆರೋಪಿ ನಡೆದುಕೊಂಡು ಬರುತ್ತಿದ್ದವನು ನಮ್ಮ ಬೈಕನ್ನು ನಿಲ್ಲಿಸುವಂತೆ ಹೇಳಿದ್ದರಿಂದ ನಾವು ಬೈಕ್ ನಿಲ್ಲಿಸಿದೆವು. ಆರೋಪಿ ತನ್ನ ಬ್ಯಾಗಿನಲ್ಲಿದ್ದ ಚಾಕುವನ್ನು ತೆಗೆದು ಫರಾದ್‌ನ ಎಡ ಅಂಗೈಗೆ ಹೊಡೆದನು. ಇದರಿಂದ ಫರಾದ್‌ನ ಎಡಗೈ ಹೆಬ್ಬೆರಳು ತುಂಡಾಗಿ ಬಿದ್ದಿತು. ಆರೋಪಿ ಚಾಕುವನ್ನು ತೆಗೆದುಕೊಂಡು ಸ್ಥಳದಿಂದ ಹೊರಟು ಹೋದನು. ನಾವು ಸ್ಥಳದಲ್ಲಿ ಬಿದ್ದಿದ್ದ ಫರಾದ್‌ನ ಎಡಗೈ ಹೆಬ್ಬೆರಳನ್ನು ತೆಗೆದುಕೊಂಡು ಫರಾದ್‌ನನ್ನು ಕರೆದುಕೊಂಡು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಹೋದೆವು.

3. ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಇಲ್ಲಿ ಆಗುವುದಿಲ್ಲ, ಬೆಂಗಳೂರಿಗೆ ಕರೆದುಕೊಂಡು ಹೋಗಿ ಎಂದು ಹೇಳಿದರು. ಅದರಂತೆ ಫರಾದ್‌ನನ್ನು ಕರೆದುಕೊಂಡು ಬೆಂಗಳೂರಿನ ಆಸ್ಪತ್ರೆಗೆ ಹೋದರು. ಪೊಲೀಸರಿಗೆ ದೂರನ್ನು ನಾನು ಅದೇ ದಿನ ರಾತ್ರಿ ನೀಡಿರುತ್ತೇನೆ. ದೂರನ್ನು ಹಾಗು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

4. ನಾನು ದೂರು ಕೊಟ್ಟ ನಂತರ ಮರುದಿನ ಮಧ್ಯಾಹ್ನ 1.30 ಗಂಟೆಗೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ ನಾನೇ ಸ್ಥಳವನ್ನು ತೋರಿಸಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ರಕ್ತವಾಗಿದ್ದ ಮಣ್ಣನ್ನು ತೆಗೆದುಕೊಂಡರು. ಮಹಜರನ್ನು ಹಾಗು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಮಹಜರನ್ನು ಈಗ ನಿಪಿ.2 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಿಪಿ.2 ಕ್ಕೆ ನಾನು ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ.

5. ಫರಾದ್‌ಗೆ ಹೊಡೆಯಲು ಉಪಯೋಗಿಸಿದ ಚಾಕುವನ್ನು ನೋಡಿದರೆ ನಾನು ಗುರುತಿಸಲಾರೆ.

6. ಯಾವ ಕಾರಣಕ್ಕಾಗಿ ಆರೋಪಿ ಫರಾದ್‌ಗೆ ಚಾಕುವಿನಿಂದ ಹೊಡೆದ ಎಂದು ನನಗೆ ಗೊತ್ತಾಗಲಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**

7. ನಿಪಿ.1 ದೂರನ್ನು ನಾನು ಮರುದಿನ ಬೆಳಿಗ್ಗೆ ಠಾಣೆಯಲ್ಲಿ ನೀಡಿರುತ್ತೇನೆ ಅಂದರೆ ಸರಿ. ಸ್ಥಳಕ್ಕೆ ಮಹಜರಿಗಾಗಿ ಬಂದಿದ್ದ ಪೊಲೀಸರು ಸ್ಥಳದಲ್ಲಿ ಸಾದ ಮಣ್ಣನ್ನು ತೆಗೆದುಕೊಂಡರು ಅಂದರೆ ಸರಿ. ಸ್ಥಳದಲ್ಲಿ ಪೊಲೀಸರು ಮಹಜರ ಬರೆದು, ವಿಷಯ ತಿಳಿಸಿ ನನ್ನ ಸಹಿ ಪಡೆದರು ಅಂದರೆ ಸರಿ.

**8.** ಈಗ ನನಗೆ ತೋರಿಸಿದ ಚಾಕುವಿನಿಂದಲೇ ಆ ದಿನ ಆರೋಪಿ ಫರಾದ್‌ಗೆ ಹೊಡೆದಿದ್ದು ಅಂದರೆ ಸಾಕ್ಷಿ ನನಗೆ ಆ ದಿನ ಚಾಕುವನ್ನು ನೋಡಲು ಆಗಲಿಲ್ಲ ಎಂದು ನುಡಿದಿದ್ದಾರೆ.

**9.** ಘಟನೆ ನಡೆದ ಹಿಂದಿನ ದಿನ ಆರೋಪಿ ಮತ್ತು ಫರಾದ್ ನಡುವೆ ಗಾಂಜಾ ಹೊಡೆಯುವ ವಿಚಾರದಲ್ಲಿ ಗಲಾಟೆಯಾಗಿದ್ದು, ಆಗ ಫರಾದ್ ಆರೋಪಿಗೆ ಹೊಡೆದಿದ್ದರಿಂದ ಘಟನೆಯ ದಿನ ಆರೋಪಿ ಫರಾದ್‌ಗೆ ಚಾಕುವಿನಿಂದ ಹೊಡೆದಿರುತ್ತಾನೆ ಅಂದರೆ ಸರಿ.

<u>**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ**</u>

**10.** ಫರಾದ್‌ನ ಅಣ್ಣನ ಹೆಸರು ಮುಷಾ ಫೀರ್. ಫರಾದ್ ಹಾಗು ಮುಷಾ ಫೀರ್ ಗಾಂಜಾ ಸೇದುತ್ತಾರೆ ಅಂದರೆ ಸರಿಯಲ್ಲ. ಫರಾದ್ ಹಾಗು ಮುಷಾ ಫೀರ್ ಗಾಂಜಾ ಸೇದುವ ಕಡೆ ಹೋಗುವುದಿಲ್ಲ. ಫರಾದ್ ಗಾಂಜಾ ಸೇದುತ್ತಿದ್ದ ಅಂದರೆ ಸರಿಯಲ್ಲ. ಫರಾದ್‌ನ ಅಣ್ಣ ಗಾಂಜಾ ಸೇದುತ್ತಾನೆ ಎನ್ನುವ ವಿಚಾರ ಆರೋಪಿ ಫರಾದ್‌ನ ಮನೆಯವರಿಗೆ ಹೇಳಿದ್ದರಿಂದ ಫರಾದ್‌ನ ಮನೆಯವರು ಫರಾದ್‌ನ ಅಣ್ಣನಿಗೆ ಹೊಡೆದಿದ್ದರು ಅಂದರೆ ಸರಿ. ಸದರಿ ಘಟನೆಯಿಂದಾಗಿ ಫರಾದ್, ಆತನ ಅಣ್ಣ ಆರೋಪಿಯ ಮೇಲೆ ಕೋಪ ಮಾಡಿಕೊಂಡು ಮಾತು ಬಿಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲ.

**11.** ಫರಾದ್ ಸಹ ವೆಲ್ಡಿಂಗ್ ಕೆಲಸ ಮಾಡುತ್ತಾನೆ. ನಿಪಿ.1 – ದೂರನ್ನು ಘಟನೆಯಾದ ಮರುದಿನ ಪೊಲೀಸರು ಕೈಯಲ್ಲಿ ಬರೆದುಕೊಂಡರು. ದೂರನ್ನು ನಾನು ಟೈಪ್ ಮಾಡಿಸಿ ಕೊಟ್ಟಿರುವುದಿಲ್ಲ. ಫರಾದ್ ಮತ್ತು ನಾನು ಆತ್ಮೀಯ ಸ್ನೇಹಿತರು ಅಂದರೆ ಸರಿ. ನಾವಿಬ್ಬರು ಒಂದೇ ಕಡೆ ಕೆಲಸ ಮಾಡುತ್ತೇವೆ ಅಂದರೆ ಸರಿ.

**12.** ಫರಾದ್‌ಗೆ ಆರೋಪಿಯನ್ನು ಕಂಡರೆ ಆಗುತ್ತಿರಲಿಲ್ಲವಾದ್ದರಿಂದ ಆರೋಪಿಗೆ ಏನಾದರೂ ತೊಂದರೆ ಕೊಡಬೇಕು ಎಂದು ಫರಾದ್ ನನ್ನ ಬಳಿ ಹೇಳುತ್ತಿದ್ದ ಅಂದರೆ ಸರಿಯಲ್ಲ.

**13.** ವೆಲ್ಡಿಂಗ್ ಕೆಲಸ ಮಾಡುವಾಗ ಆಕಸ್ಮಿಕವಾಗಿ ಯಂತ್ರಕ್ಕೆ ಬೆರಳು ಅಡ್ಡ ಬಂದರೆ, ಬೆರಳು ಕತ್ತರಿಸಿ ಹೋಗುತ್ತದೆ ಅಂದರೆ ಸರಿ.

**14.** ಫರಾದ್ ಹೇಳಿದ್ದಂತೆ ನಾನು ಆರೋಪಿಯ ವಿರುದ್ಧ ದೂರು ಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ. ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ಒಂದು ಬದಿ ಶಾಲೆ ಹಾಗು ಇನ್ನೊಂದು ಬದಿ ಮನೆಗಳಿವೆ ಅಂದರೆ ಸರಿ. ಸದರಿ ಸ್ಥಳದಲ್ಲಿ ಟೀ ಅಂಗಡಿಗಳು ಇವೆ ಅಂದರೆ ಸರಿ. ಸದರಿ ಟೀ ಅಂಗಡಿಗಳನ್ನು ರಾತ್ರಿ 11 ಗಂಟೆಯಾದರೂ ತೆರೆದಿರುತ್ತಾರೆ ಅಂದರೆ ಸರಿಯಲ್ಲ. ಆಲ್ ಅಮಿನ್ ಶಾಲೆಯ ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲ ಅಂದರೆ ಸರಿಯಲ್ಲ.

**15.** ಫರಾದ್ ಕೇಳಿದಂತೆ ಆತನಿಗೆ ಸಹಾಯ ಮಾಡುವ ಸಲುವಾಗಿ ನಾನು ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಹೇಳಿದಂತೆ ಘಟನೆಯ ದಿನ ನಾನು, ಫರಾದ್ ಹಾಗು ಸುಹೇಲ್ ಬೈಕಿನಲ್ಲಿ ಒಟ್ಟಿಗೆ ಹೋಗುತ್ತಿರಲಿಲ್ಲ ಅಂದರೆ ಸರಿಯಲ್ಲ.

**16.** ಘಟನೆ ನಡೆದಿದ್ದು ಟಾರ್ ರಸ್ತೆಯ ಮೇಲೆ. ಮಹಜರಿಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ.2 - ಮಹಜರಿನಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ಪೊಲೀಸರು ನನಗೆ ಹೇಳಲಿಲ್ಲ ಅಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದು ನನ್ನ ಸಮಕ್ಷಮ ಮಹಜರ ಮಾಡಿ ರಕ್ತವಾದ ಮಣ್ಣು ಹಾಗು ಸಾದಾ ಮಣ್ಣನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

**17.** ಆರೋಪಿ ಬೆಂಗಳೂರಿನ ಕೆಂಗೇರಿಯಲ್ಲಿ ವಾಸವಿದ್ದನು ಅಂದರೆ ಸರಿ. ಆರೋಪಿ ಬೆಂಗಳೂರಿನ ಕೆ.ಆರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡುತ್ತಿದ್ದನು ಅಂದರೆ ನನಗೆ ಗೊತ್ತಿಲ್ಲ. ಆರೋಪಿ ಹಬ್ಬಗಳಿಗೆ ಮಾತ್ರ ಚನ್ನಪಟ್ಟಣದಲ್ಲಿರುವ ತನ್ನ ಅಜ್ಜಿಯ ಮನೆಗೆ ಬರುತ್ತಿದ್ದನು ಅಂದರೆ ನನಗೆ ಗೊತ್ತಿಲ್ಲ.

**18.** ನಾನು ಹೇಳಿದಂತೆ ಆರೋಪಿ ಘಟನೆಯ ದಿನ ಚಾಕುವಿನಿಂದ ಫರಾದ್‌ನ ಬೆರಳಿಗೆ ಹೊಡೆದಿರುವುದಿಲ್ಲ ಅಂದರೆ ಸರಿಯಲ್ಲ. ಫರಾದ್ ಕೆಲಸ ಮಾಡುವ ಜಾಗದಲ್ಲಿ ಆಕಸ್ಮಿಕವಾಗಿ ಆತನ ಹೆಬ್ಬೆರಳು ಕತ್ತರಿಸಿ ಹೋಗಿದ್ದ ಸಂದರ್ಭವನ್ನು ಉಪಯೋಗಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ದೂರು

ನೀಡಲಾಗಿದೆ ಅಂದರೆ ಸರಿಯಲ್ಲ. ನಾನು ಘಟನೆಯ ದಿನ ಫರಾದ್‌ನನ್ನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ ಅಂದರೆ ಸರಿಯಲ್ಲ. ಚನ್ನಪಟ್ಟಣ ಆಸ್ಪತ್ರೆಯಲ್ಲಿ ವೈದ್ಯರಿಗೆ ನಾವು ಘಟನೆ ಹೇಗೆ ನಡೆಯಿತು ಎಂದು ಹೇಳಿರುತ್ತೇನೆ. ಸದರಿ ವಿವರಗಳನ್ನು ವೈದ್ಯರು ಬರೆದುಕೊಂಡರು. ಸದರಿ ವಿವರಗಳನ್ನು ವೈದ್ಯರಿಗೆ ಫರಾದ್‌ನ ಅಣ್ಣ - ಮುಷಾ ಫೀರ್ ಹೇಳಿರುತ್ತಾರೆ. ನಾನು ಹೇಳಿದ್ದಂತೆ ಯಾವುದೇ ಘಟನೆ ನಡೆದಿಲ್ಲವಾದರೂ ಸಹ ನಾನು ಆರೋಪಿಯ ವಿರುದ್ಧ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**